ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
ಬೆಂಗಳೂರು ದಕ್ಷಿಣ ವಲಯ-04, ಕೆ.ಅರ್.ಪುರ, ಬೆಂಗಳೂರು -36

ಸಂಖ್ಯೆ: ಸಿ5 ನಿ.ಪ.ದೃ /2022-2023 ದಿನಾಂಕ:13/09/2022

ರವರಿಗೆ
ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ
ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯ
ಬೆಂಗಳೂರು-02

ಮಾನ್ಯರೆ,

ವಿಷಯ:- ಬಿ.ಎನ್.ಆರ್. ಮೆಮೊರಿಯಲ್ ಶಾಲೆ, ಶಾಂತಿ ಲೇಔಟ್, ರಾಮಮೂರ್ತಿನಗರ, ಬೆಂಗಳೂರು- 16 ಶಾಲೆಯ ನಿರಾಕ್ಷೇಪಣಾ ಪತ್ರಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಸಲ್ಲಿಸುತ್ತಿರುವ ಬಗ್ಗೆ.
ಉಲ್ಲೇಖ:- ಬಿ.ಎನ್.ಆರ್ ಮೆಮೊರಿಯಲ್ ಟ್ರಸ್ಟ್ ರವರ ಮನವಿ ದಿನಾಂಕ:13/09/2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬಿ.ಎನ್.ಆರ್ ಮೆಮೊರೊಯಲ್ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ನ್.ಆರ್. ಮೆಮೊರಿಯಲ್ ಶಾಲೆ, ಶಾಂತಿ ಲೇಔಟ್, ರಾಮಮೂರ್ತಿನಗರ, ಬೆಂಗಳೂರು-16 ಶಾಲೆಗೆ ಕೇಂದ್ರ ಪಠ್ಯ ಕ್ರಮದಲ್ಲಿ ಶಾಲೆ ನಡೆಸಲು ನಿರಾಕ್ಷೇಪಣಾ ಪತ್ರಕ್ಕೆ ಸಂಬಂಧಿಸಿದಂತೆ ಆಯುಕ್ತರ ಕಛೇರಿಯಿಂದ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ಮತ್ತು ಅಗ್ನಿನಂದಕ ಇಲಾಖೆಯಿಂದ ನೀಡುವ ಸಮಾಪನ ಪತ್ರವನ್ನು ನೀಡುವಂತೆ ತಿಳಿಸಿರುವುದರಿಂದ ಸದರಿ ಪ್ರಮಾಣ ಪತ್ರಗಳನ್ನು ಉಲ್ಲೇಖಿತ ಪತ್ರದೊಂದಿಗೆ ಸಲ್ಲಿಸಿರುತ್ತಾರೆ.

ಅದರಂತೆ ಶಾಲಾ ಆಡಳಿತ ಮಂಡಳಿಯವರು ಕಾರ್ಯಪಾಲಕ ಅಭಿಯಂತರರ ಕಛೇರಿ. ಲೋಕೋಪಯೋಗಿ ಇಲಾಖೆ ಅನೆಕ್ಸ್ ಕಟ್ಟಡ ಕೆ.ಆರ್. ವೃತ್ತ ಬೆಂಗಳೂರು ರವರು ಶಾಲೆಯ ಹೆಸರಿಗೆ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಿರುತ್ತರೆ. ಹಾಗು ಜಿಲ್ಲಾ ಅಗ್ನಿನಂದಕ ಅಧಿಕಾರಿಗಳು ಬಾಣಸವಾಡಿ ರವರು Fire Compliance report ಪತ್ರವನ್ನು ಶಾಲೆಯ ಹೆಸರಿಗೆ ನೀಡಿರುತ್ತಾರೆ. ಸದರಿ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ಈ ಪತ್ರದೊಂದಿಗೆ ಲಗತ್ತಿಸಿ ಅಗತ್ಯ ಕ್ರಮಕ್ಕಾಗಿ ತಮ್ಮ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ನಂಬುಗೆಯ

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಬೆಂಗಳೂರು ದಕ್ಷಿಣ ವಲಯ-04

Scanned with OKEN Scanner